

# ಪರಿಪೂರ್ಣ ಪುತ್ರಿಯ ಪ್ರಾಣಾಂತಿಕ ರೋಕ!

■ ಗೌರಿ

ಸಸ್ಪೆನ್ಸ್ ಥ್ರಿಲ್ಲರ್ ಸಿನಿಮಾಗಳ ಆತ್ಮ ಇರುವುದು ಕಥನಕ್ಕೆ ಸಿಗುವ ತಿರುವುಗಳಲ್ಲಿ. ಎರಡೂವರೆ ಗಂಟೆಯ ಒಂದು ಸಿನಿಮಾದಲ್ಲಿ ಪ್ರೇಕ್ಷಕರನ್ನು ಹಿಡಿದಿಡಲು ಹಲವು ಇಂಥ ತಿರುವುತಾಣಗಳು ಬೇಕಾಗುತ್ತವೆ. ಅವು ಒಂದಕ್ಕಿಂತ ಇನ್ನೊಂದು ರೋಚಕವೂ ಆಗಿರಬೇಕಾಗುತ್ತದೆ. ಆದರೆ ಇಂಥ ಒಂದು ಟ್ವಿಸ್ಟ್ ಇಟ್ಟುಕೊಂಡು ಕಿರುಚಿತ್ರ ಮಾಡುವವರೂ ಸಾಕಷ್ಟಿದ್ದಾರೆ. 'ದ ಪರ್ಫೆಕ್ಟ್ ಡಾಟರ್' ಇಂಥ ಕಿರುಚಿತ್ರ.

'ಪರಿಪೂರ್ಣ ಪುತ್ರಿ' ಎಂದಾಕ್ಷಣ ನಮ್ಮ ಮನಸಲ್ಲಿ ಮೂಡುವ ಇಮೇಜ್ ಎಂಥದ್ದು? ತಂದೆ ತಾಯಿಯನ್ನು ಕಾಳಜಿಯಿಂದ ನೋಡಿಕೊಳ್ಳುವ, ಕುಟುಂಬದ ಕಷ್ಟಗಳಿಗೆ ಹೆಗಲು ಕೊಡುವ ಒಬ್ಬಳು ಹುಡುಗಿ. ಗುಣವಂತೆ, ಲಕ್ಷಣವಂತೆ, ಜಾಣೆ ಹೀಗೆ ಆ ಇಮೇಜ್, ನಾವು ಇದುವರೆಗೆ ನೋಡಿದ ಹಲವು ಸಿನಿಮಾಗಳು, ಸಾಹಿತ್ಯಕೃತಿಗಳು, ಸೀರಿಯಲ್‌ಗಳ 'ಪುತ್ರಿ'ಯರ ಚಿತ್ರಕ್ಕೆ ಸೇರಿಕೊಂಡು ಬೆಳೆಯುತ್ತಲೇ ಹೋಗುತ್ತದೆ. ಆದರೆ ಸಾಂಪ್ರದಾಯಿಕವಾಗಿ ಬೆಳೆದುಬಂದ ಈ ಇಮೇಜ್ ಅನ್ನು ಬ್ರೇಕ್ ಮಾಡುವುದರಲ್ಲಿಯೇ ಈ ಕಿರುಚಿತ್ರದ ಶಕ್ತಿ ಇರುವುದು. ಹಾಗೆ ನೋಡಿದರೆ ಟೈಟಲ್‌ನಲ್ಲಿಯೇ ನಿರ್ದೇಶಕರು ಪ್ರೇಕ್ಷಕರನ್ನು ದಾರಿ ತಪ್ಪಿಸಿಬಿಡುತ್ತಾರೆ. ಸಸ್ಪೆನ್ಸ್ ಚಿತ್ರದ ಮುಖ್ಯಗುಣಗಳಲ್ಲಿ ಹೀಗೆ ಪ್ರೇಕ್ಷಕರ ದಿಕ್ಕುತಪ್ಪಿಸುವುದೂ ಒಂದಲ್ಲವೇ?

ಅಲೀನಾ ಒಬ್ಬಳು ಫಿಲ್ಮ್‌ಮೇಕರ್. ಅರೆಪಟ್ಟಣದ ಹೊರವಲಯದಲ್ಲಿರುವ ಒಂದು ದೊಡ್ಡ ಮನೆಯನ್ನು ತನ್ನ ಚಿತ್ರೀಕರಣಕ್ಕೆ ಬಳಸಿಕೊಳ್ಳಬಹುದೇ ಎಂಬುದನ್ನು ನೋಡಲು ಅವಳು ಬಂದಿದ್ದಾಳೆ. ಮನೆಯ ಒಡತಿ ಆ್ಯನಾ ಅವಳನ್ನು ಆದರದಿಂದಲೇ ಬರಮಾಡಿಕೊಳ್ಳುತ್ತಾಳೆ. ಹೇಳಿ ಕೇಳಿ ಅವಳು ಅಲೀನಾಳ ಅಮ್ಮನ ವಯಸ್ಸಿನವಳು. ಮಗಳನ್ನು ಮಾತಾಡಿಸುವಷ್ಟೇ ಅಕ್ಕರೆಯಿಂದ ಇವಳನ್ನು ಮಾತಾಡಿಸುತ್ತಾಳೆ. 'ನಿನ್ನ ಕಣ್ಣುಗಳು ಎಷ್ಟೊಂದು ಸುಂದರವಾಗಿವೆ' ಎಂದು ಪ್ರಶಂಸೆ ಮಾಡುತ್ತಾಳೆ. ನಂತರ ಮನೆಯನ್ನು ತೋರಿಸಿಕೊಂಡು ಬರಲು ಹೊರಡುತ್ತಾಳೆ. ವಿಶಾಲವಾದ ಲಿವಿಂಗ್ ರೂಮ್. ದೊಡ್ಡ ಪುಸ್ತಕ ಕಪಾಟು. ಭರಪೂರ ಬೆಳಕು. ಆ ಜಾಗವನ್ನು ನೋಡಿ ಅಲೀನಾಳಿಗೆ ತುಂಬ ಖುಷಿಯಾಗುತ್ತದೆ. 'ಇಷ್ಟು ದೊಡ್ಡ ಮನೆಯಲ್ಲಿ ಒಬ್ಬರೇ ಇರುತ್ತೀರಾ?' ಎಂದು ಕೇಳುತ್ತಾರೆ. ಆಗ ಆ್ಯನಾ ಮುಖ ಮುದುಡುತ್ತದೆ. ತನ್ನ ಗಂಡ ಎರಡು ವರ್ಷಗಳ ಹಿಂದೆ ಕ್ಯಾನ್ಸರ್ ಬಂದು ತೀರಿಹೋದಾಗಿನಿಂದ ನಾನು ಒಬ್ಬಳೇ ಬದುಕುತ್ತಿದ್ದೇನೆ ಎನ್ನುತ್ತಾಳೆ. ಇದನ್ನು ಕೇಳಿ ಅಲೀನಾ ನೊಂದುಕೊಳ್ಳುತ್ತಾಳೆ. ಆ ವಿಷಾದವನ್ನು ಮರೆಸಲು ಆ್ಯನಾ, 'ನೀನು ಯಾವ ರೀತಿಯ ಸಿನಿಮಾ ಮಾಡುತ್ತಿದ್ದೀಯಾ?' ಎಂದು ಕೇಳುತ್ತಾಳೆ. 'ಇದೊಂದು ರೊಮ್ಯಾಂಟಿಕ್ ಕಾಮಿಡಿ ಸಿನಿಮಾ. ಬ್ರೇಕ್‌ಅಪ್ ಆಗಿ ಮತ್ತೆ ಒಂದುಗೂಡುವ ಜೋಡಿಗಳು ಒಟ್ಟಿಗೇ ಕಳೆಯುವ ಕ್ಷಣಗಳನ್ನು ಈ ಮನೆಯಲ್ಲಿ ಚಿತ್ರೀಕರಿಸುವ ಆಲೋಚನೆ ಇದೆ' ಎನ್ನುತ್ತಾಳೆ. ಇದನ್ನು ಕೇಳಿ ಆ್ಯನಾ, 'ಹಾಗಾದರೆ ಮೇಲಿನ ಮಹಡಿಯಲ್ಲಿರುವ ರೂಮು ನಿನ್ನ ಚಿತ್ರೀಕರಣಕ್ಕೆ ತುಂಬ ಚೆನ್ನಾಗಿ ಹೊಂದುತ್ತದೆ' ಎಂದು ಮೇಲಕ್ಕೆ ಕರೆದೊಯ್ಯುತ್ತಾಳೆ. ಮೆಟ್ಟಿಲು ಹತ್ತಬೇಕು ಎನ್ನುವಷ್ಟರಲ್ಲಿ ಮೇಲುಗಡೆಯಿಂದ ಯಾರೋ ನರಳುತ್ತಿರುವ ಸದ್ದು ಕೇಳಿಸುತ್ತದೆ. 'ಏನದು? ಯಾರು ಕಿರುಚುತ್ತಿರುವುದು?' ಎಂದು ಅಲೀನಾ ಕೇಳಿದರೆ ಮರುಕ್ಷಣವೇ ಆ್ಯನಾಳ ಮುಖಭಾವವೇ ಬದಲಾಗುತ್ತದೆ. 'ಯಾವ ಸದ್ದು? ನನಗೇನೂ ಕೇಳಿಸುತ್ತಿಲ್ಲ' ಎಂದು ಗಡುಸಾಗಿ ಹೇಳುತ್ತಾಳೆ. ಅಲೀನಾಗೆ ಭಯವಾಗಿ ಹೊರಗೆ ಓಡಲು ಯತ್ನಿಸಿದರೆ ಬಾಗಿಲು ಲಾಕ್ ಆಗಿದೆ. ಹಿಂದಿನಿಂದ ಬಂದ ಆ್ಯನಾ, ಅಲೀನಾಳ ಮುಖಕ್ಕೆ ಬಟ್ಟೆ ಹಾಕಿ ಎಳೆದೊಯ್ಯುತ್ತಾಳೆ.

ಅವಳು ಎಲ್ಲಿಗೆ ಎಳೆದೊಯ್ಯುತ್ತಾಳೆ? ಏನು ಮಾಡುತ್ತಾಳೆ? ಮೇಲಿನ ಮಹಡಿಯಲ್ಲಿ ನರಳುತ್ತಿರುವವರು ಯಾರು? ಎಂಬೆಲ್ಲ ಪ್ರಶ್ನೆಗಳಿಗೆ ಉತ್ತರ ಬೇಕಿದ್ದರೆ ಕಿರುಚಿತ್ರವನ್ನೇ ನೋಡಬೇಕು.

ತುಂಬ ವಿಶೇಷವಾಗಿಯೇನೂ ಇಲ್ಲದಿದ್ದರೂ ಆರಿಸಿಕೊಂಡ ಜಾನರ್‌ನಲ್ಲಿ ಅಚ್ಚುಕಟ್ಟಾಗಿ ಕಟ್ಟಿರುವ ಕಾರಣಕ್ಕೆ ಈ ಕಿರುಚಿತ್ರ ಗಮನಸೆಳೆಯುತ್ತದೆ.

**ಹೆಸರು:** ದ ಪರ್ಫೆಕ್ಟ್ ಡಾಟರ್
**ನಿರ್ದೇಶನ:** ಎಲಿಜಾ ರೋಡ್ರಿಗಸ್
**ನಿರ್ಮಾಣ:** ಬೆನ್ ಸ್ಟ್ರಾಂಗ್
**ಛಾಯಾಗ್ರಹಣ:** ಮೈಖೆಲ್ ಲೋವರ್ಡ್
**ಸಂಗೀತ:** ಇಲಿಯಾ ಕ್ರಿಸ್ಯೂಲಾಸ್
**ತಾರಾಗಣ:** ಲೋರೆಲ್ ಬ್ರೋವರ್, ಇಸಾಬೆಲ್ಲೆ ಗರ್ಬಾನಿ

ಕಿರುಚಿತ್ರ ವೀಕ್ಷಣೆಗೆ http://surl.li/azerw ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.